INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,59-68
Peer Reviewed Journal, Referred Journal

# ಕನಕದಾಸರ ಸಾಹಿತ್ಯದಲ್ಲಿ ಪ್ರಭುತ್ವ ವಿರೋಧಿ ನೆಲೆಗಳು

**ಲಕ್ಷ್ಮೀಕಾಂತ ಮಿರಜಕರ.**[1]

ಮಧ್ಯಕಾಲಿನ ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಗಮನಿಸಿದಾಗ; ಈ ಸಂದರ್ಭದಲ್ಲಿ ಕರ್ನಾಟಕವನ್ನು ಬಹಳಷ್ಟು ರಾಜ ಮನೆತನಗಳು ಆಳ್ವಿಕೆ ಮಾಡಿರುವುದನ್ನು ಗಮನಿಸಬಹುದು. ಎಲ್ಲ ರಾಜಮನೆತನಗಳು ರಾಜಕೀಯ ಪ್ರಭುತ್ವವನ್ನು ಮೆರೆದು ಇತಿಹಾಸಕ್ಕೆ ಅನೇಕ ಸ್ಥಿತ್ಯಂತರಗಳನ್ನು ನೀಡಿ ಹೋಗಿವೆ. ಅಂತಹ ರಾಜಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವು ಒಂದು. ಧಾರ್ಮಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಬಹುಮುಖ್ಯ ತಳಹದಿಯನ್ನು ಹೊಂದಿ ಬಲಿಷ್ಟ ರಾಜ ಮನೆತನವಾಗಿ ಆಳ ಹೋದ ವಿಜಯನಗರ ಸಾಮ್ರಾಜ್ಯದ ಕಾಲಮಾನದಲ್ಲಿಯೇ ಕನಕದಾಸರು ಹುಟ್ಟಿ ಬದುಕಿದ್ದರು. ಸ್ವತಃ ಕನಕದಾಸರು ಮಾಂಡಳಿಕರಾಗಿ ಕಾರ್ಯನಿರ್ವಹಿಸಿದ್ದರು. ಹಾಗಾಗಿ ಕನಕದಾಸರಿಗೆ ಅಂದಿನ ಪ್ರಭುತ್ವದ ಬಗೆಗೆ ಚೆನ್ನಾಗಿ ಗೊತ್ತಿತ್ತು. ಪ್ರಭುತ್ವವನ್ನು ನೇರವಾಗಿ ಎದುರಿಸಿದ್ದ ಮುಖಾಮುಖಿಯಾಗಿದ್ದ ಕನಕದಾಸರು ತಮ್ಮ ಕಾವ್ಯ ಮತ್ತು ಕೀರ್ತನೆಗಳಲ್ಲಿ ಪ್ರಭುತ್ವದ ಬಗೆಗೆ ಬಹುಸೂಕ್ಷ್ಮವಾಗಿ ಅವಲೋಕನ ಮಾಡಿದವರು. ಕನಕದಾಸರ ತಂದೆ ಬೀರೇಗೌಡರು 78 ಗ್ರಾಮಗಳ ಡಣಾಯಕರಾಗಿ ಕಾರ್ಯಮಾಡುತ್ತಿದ್ದರು. ವಿಜಯನಗರ ಅರಸರಲ್ಲಿ ದಂಡನಾಯಕರಾಗಿಯೂ ಕಾರ್ಯನಿರ್ವಹಿಸಿದ್ದರು. ಇವರ ಮರಣದ ಅನಂತರ ಕನಕದಾಸರು ಬಾಡ ಗ್ರಾಮಕ್ಕೆ ಮಾಂಡಳಿಕರಾಗಿ ನೇಮಕಗೊಂಡು ಕಾರ್ಯನಿರ್ವಹಿಸಿದರು. ಹಾಗೆಯೇ, ಕನಕದಾಸರು ಚಿಕ್ಕ ಪಾಳೆಯಪಟ್ಟೊಂದನ್ನು ಆಳ್ವಿಕೆ ಮಾಡುತ್ತಿದ್ದರು. ಅದಕ್ಕೆ ಅವರು ಬರೆದ ಕೀರ್ತನೆಯೇ ಉಲ್ಲೇಖವಾಗಿ ನಮ್ಮೆದುರಿಗೆ ಇದೆ. ಅದೆನೆಂದರೆ;

"ದೊರೆತನವ ಬಿಡಿಸಿ ಸುಸ್ಥಿರ ಮಾರ್ಗ ತೋರಿಸಿದೆ
ನರಮಾತ್ರದವನೆನದೆ ಹರಿಯೇ"
----------------------
"ಕನಕದಳದಲಿ ಬಂದು ಕಲೆತನೆಂದರೆ ಫೌಜು
ಕನುಕುಮನು ಕಾಗುವುದು ಹರಿಯೆ
ಮೊನೆಗಾರತನವೆಂಬ ಶನಿ ಬಿಡಿಸಿ ತವಪಾದ
ವನಜವನು ಸೇರಿಸಿದೆ ಹರಿಯೆ"

[1].ಸಂಶೋಧನಾ ವಿದ್ಯಾರ್ಥಿ,ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಶಿಗ್ಗಾಂವ ತಾಲೂಕು, ಹಾವೇರಿ ಜಿಲ್ಲೆ.

ಇದೆ ಕೀರ್ತನೆಯಲ್ಲಿಯೇ ಕನಕದಾಸರು ತಾವು ಮಾರಣಾಂತಿಕ ಪೆಟ್ಟು ತಿಂದು ಹರಿ ಪ್ರತ್ಯಕ್ಷನಾಗಿ ಪ್ರಾಣಭಿಕ್ಷೆ ನೀಡಿದ್ದನ್ನು ಪ್ರಸ್ತಾಪಿಸಿದ್ದಾರೆ. ಹಾಗಾಗಿ ದೊರೆತನವನ್ನು ತ್ಯಜಿಸಿ ಆಧ್ಯಾತ್ಮದ ಕಡೆಗೆ ತುಡಿಯುವ ಮನಸ್ಸನ್ನು ಕನಕದಾಸರು ಮಾಡುತ್ತಾರೆ. ಈ ಸಂದರ್ಭವನ್ನು ಮೃತ್ಯುಂಜಯ ರುಮಾಲೆಯವರು ದೊರೆತನವನ್ನು ತ್ಯಜಿಸುತ್ತಿರುವುದು ಹೊಣೆಗಾರಿಕೆಯ ಭಾರಕ್ಕೆ ಹೆದರಿ ಅಲ್ಲ ಅದರ ಗರ್ಭದಲ್ಲಿರುವ ಜೀವ ವಿರೋಧಿ ನಿಲುವಿಗೆ; ನಿರ್ದಯ ಮನಸ್ಸಿಗೆ. ಆದ್ದರಿಂದ ದೊರೆತನ ಅರಸುತನಗಳನ್ನು ಬಿಟ್ಟು ಈ ದಾಸ ಮನಬಡತನವನ್ನು ಬಯಸುತ್ತದೆ. ಇಂಥ ದಾಸತನದಲ್ಲಿ ಸಾಮಾನ್ಯತೆಯಿದೆ, ಪ್ರೀತಿ ಕರುಣೆಗಳಿವೆ, ನೇರ ಪ್ರಾಮಾಣಿಕತೆಗಳಿವೆ". ಪಾಳೆಯ ಪಟ್ಟಿನ ಅನೀರಿಕ್ಷಿತವಾದ ಶಿಥಿಲತೆಯಿಂದ ಪಾಠ ಕಲಿತ ಕನಕದಾಸರು ಹರಿಭಕ್ತಿಗೆ ಎಳೆಸಿದ್ದು ತೀರಾ ಸಹಜ ಘಟನೆಯಂತೆಯೇ ಕಾಣುತ್ತಿದ್ದರು. ಅದು ಭೌತಿಕತೆಯ ವೈಫಲ್ಯ ಮತ್ತು ಪಾರಮಾರ್ಥಿಕತೆಯ ಸಾಧನೆಯಾಗಿ ಗಮನ ಸೆಳೆಯುತ್ತದೆ. ಅದು ಪ್ರಭುತ್ವವನ್ನೇ ವಿರೋಧಿಸಿ, ನಿರಾಕರಿಸಿದ ಭಕ್ತಿನಿಷ್ಠೆಯ ಪ್ರಭಾವದ ಹಿನ್ನಲೆಯಲ್ಲಿ ಪ್ರಾಮುಖ್ಯವೆನಿಸುತ್ತದೆ" ಎಂದು ಅಭಿಪ್ರಾಯವನ್ನು ಪಡುತ್ತಾರೆ.

ಕನಕದಾಸರು ವಿಜಯನಗರ ಸಾಮ್ರಾಜ್ಯದ ಅರಸರ ರಾಜಾಶ್ರಯದಲ್ಲಿದ್ದವರು. ಪ್ರಾಚೀನ ಕನ್ನಡ ಸಾಹಿತ್ಯವನ್ನು ಅಭ್ಯಶಿಸಿದಾಗ ಪ್ರಮುಖ ಕವಿಗಳಾದ ಪಂಪ, ರನ್ನ ಪೊನ್ನ ಮೊದಲಾದ ಕವಿಗಳು ರಾಜಾಶ್ರಯದಲ್ಲಿದ್ದು ಸಾಹಿತ್ಯ ರಚಿಸಿದವರೇ ಎಂದು ಗೊತ್ತಾಗುತ್ತದೆ. ಹಾಗಾಗಿ ಕನ್ನಡ ಸಾಹಿತ್ಯ ಚರಿತ್ರೆಗೂ ರಾಜಾಶ್ರಯಕ್ಕೂ ಅವಿನಾಭಾವ ಸಂಬಂಧವಿದೆ. ಕನಕದಾಸರ ಕಾವ್ಯಗಳನ್ನು ಓದಿದಾಗ ಮಧ್ಯಕಾಲೀನ ಚರಿತ್ರೆಯನ್ನು ನಾವು ಅವರ ಕೃತಿಗಳ ಮೂಲಕ ಓದಿಕೊಳ್ಳಬಹುದು. ಅದರಲ್ಲೂ ಮೋಹನ ತರಂಗಿಣಿ ಕೃತಿಯನ್ನು ಅಭ್ಯಾಸ ಮಾಡಿದರೆ ವಿಜಯನಗರ ಸಾಮ್ರಾಜ್ಯ ಕಾಲದ ಸಾಮಾಜಿಕ ಜೀವನವನ್ನು, ಹದಿನಾರನೇ ಶತಮಾನದ ಐತಿಹ್ಯವನ್ನು ನಾವು ಸಂಪೂರ್ಣವಾಗಿ ಅಧ್ಯಯನ ಮಾಡಬಹುದು". ಕನಕದಾಸರು ಪುರಾಣಗಳಲ್ಲಿ ದೊರೆಯುವ ಕೃಷ್ಣ ಚರಿತ್ರೆಯನ್ನು ತಮ್ಮ ಕಾಲದ ಜನ ಜೀವನದೊಂದಿಗೆ ಹದಗೊಳಿಸಿ ಮೋಹನ ತರಂಗಿಣಿಯನ್ನು ರಚಿಸಿದರು. ಅದರಷ್ಟು ಸಾಮಾಜಿಕ ವಿಷಯವನ್ನು ವಿಸ್ತರಿಸುವ ಕಾವ್ಯವೇ ವಿರಳ. ಹದಿನಾರನೇಯ ಶತಮಾನದ ವಿಜಯನಗರದ ಐತಿಹ್ಯವನ್ನು ಅಭ್ಯಾಶಿಸಲು ಬಯಸುವವರು ಮೋಹನ ತರಂಗಿಣಿಯನ್ನು ಮರೆಯಕೂಡದು. ತರಂಗಿಣಿಯು ಆ ಕಾಲದ ಕನ್ನಡಿ" ಎಂದು ಕಟ್ಟೆ ಶೇಷಾಚಾರ್ಯರು ತಮ್ಮ 'ಕನಕದಾಸರು' ಕೃತಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಕನಕದಾಸರ ಕೃತಿಗಳಲ್ಲಿ ಪ್ರಭುತ್ವ ರಾಜಸತ್ತೆಯನ್ನು, ಅವರು ವಿವರಿಸಿರುವ ರೀತಿಯನ್ನು ಕರ್ನಾಟಕದ ರಾಜಕೀಯ ಚಿತ್ರಣ ಯಾವ ರೀತಿಯಲ್ಲಿ ಮರುಹುಟ್ಟು ಪಡೆಯಿತೆಂಬುದನ್ನು ನಾವು ಅಧ್ಯಯನ ಮಾಡಬಹುದು. ಕನಕದಾಸರ ಕೃತಿಗಳಲ್ಲಿ ನಿಜಯನಗರದ ಚರಿತ್ರೆ ಇದೆ ಎಂದ ಮಾತ್ರಕ್ಕೆ ಅದು ಕೇವಲ ಅದರ ವೈಭವದ ವರ್ಣನೆಗಾಗಿ ಮಾತ್ರ ಮೀಸಲಾಗಿಲ್ಲ ಅದು ಅಖಂಡ ಕರ್ನಾಟಕದ

ಸಾಂಸ್ಕೃತಿಕ ಚರಿತ್ರೆಯ ಸ್ವರೂಪದಲ್ಲಿ ಮಂಡಿತವಾಗಿದೆ. ಇಲ್ಲಿಯವರೆಗಿನ ಚಿರಿತ್ರೆ ನಿರೂಪಿಸದೇ ಇರುವ ತಳವರ್ಗ, ಶೂದ್ರವರ್ಗಗಳ ಆತ್ಮ ಗೌರವವನ್ನು ಎತ್ತಿ ಹಿಡಿಯು ಸಮಷ್ಠಿ ಪ್ರಜ್ಞೆಯಿಂದ ನಿರೂಪಿತವಾಗಿವೆ. ಧರ್ಮ ಮತ್ತು ಪ್ರಭುತ್ವಗಳು ಮಾತ್ರ ಈ ದೇಶದಲ್ಲಿ ಚರಿತ್ರೆಯನ್ನು ನಿರ್ಮಿಸಬಲ್ಲವು ಎಂಬ ಪೂರ್ವಾಗ್ರಹದಿಂದ ಹೊರಬರಲು ಕನಕ ಕೃತಿಗಳು ನೆರವು ನೀಡಿವೆ. ಒಂದು ನಾಡನ್ನು ಅರ್ಥೈಸುವ ಹೊಸ ಸಾಧ್ಯತೆಯನ್ನು ನಮ್ಮ ಮುಂದಿಡುವ ಕನಕ ಕೃತಿಗಳು ದೇಸಿಯತೆಗೆ ಮರಳುವ ದಾರಿಯನ್ನು ತೆರೆದು ತೋರಿಸುತ್ತವೆ. ಧರ್ಮ ಮತ್ತು ಪ್ರಭುತ್ವಗಳು ಜನಪರವಾಗದೆ ಈ ದೇಶದ ಭವಿಷ್ಯ ಸಾಧ್ಯವಿಲ್ಲವೆಂಬ ಸಂದೇಶ ಹೊತ್ತ ಅವರ ಕೃತಿಗಳು ಆಂತರ್ಯದಲ್ಲಿ ಮಾನವತ್ವದ ಹುಡುಕಾಟ ಮತ್ತು ಅದು ನಮ್ಮೊಳಗೆ ಪಡೆದುಕೊಳ್ಳಬೇಕಾದ ವಿಕಾಸದ ಕ್ರಮಗಳನ್ನು ನಮ್ಮ ಮುಂದಿಡುತ್ತವೆ"

ಭಾರತದ ಇತಿಹಾಸವನ್ನು ಅಧ್ಯಯನ ಮಾಡಿದಾಗ ಪ್ರಭುತ್ವ ಪುರೋಹಿತಶಾಹಿಗಳು, ಹಣವಿದ್ದವರು, ಅಧಿಕಾರಶಕ್ತಿಗಳು, ಶೋಷಿತರನ್ನು, ಬಡವರರನ್ನು, ಹೆಣ್ಣುಮಕ್ಕಳನ್ನು, ದಲಿತಹಿಂದುಳಿದ ಜನರನ್ನು ಧರ್ಮದ ನೆಪದಲ್ಲಿ, ದೇವರು ದೇವಾಲಯಗಳ ನೆಪದಲ್ಲಿ ಸಂಸ್ಕೃತಿ ಆಚಾರ, ವಿಚಾರ, ನಂಬಿಕೆ, ಆಚರಣೆಗಳ ಹೆಸರಿನಲ್ಲಿ ದಬ್ಬಾಳಿಕೆ ಮಾಡುತ್ತ, ಶೋಷಣೆ ಮಾಡುತ್ತ ಅವರ ಮೇಲೆ ಸವಾರಿ ಮಾಡುತ್ತ ಬಂದಿರುವುದನ್ನು ಕಾಣಬಹುದು. ತಾವು ಹೇರಿರುವ ನಿಯಮಗಳ ಅಡಿಯಲ್ಲಿ, ಸಂಸ್ಕೃತಿಯ ಅಡಿಯಲ್ಲಿ ಜನರು ಭಯದಿಂದ, ಮೂಕರಂತೆ ಬದುಕುವು ಹಾಗೆ ಮಾಡಿದ್ದ ಪ್ರಭುತ್ವದ ಮನೋಭಾವನೆ ನಿರಾಂತಕವಾಗಿ ಸಾಗಿತ್ತು. ಇಂತಹ ಸಂಸ್ಕೃತಿಯನ್ನು ಪ್ರಭುತ್ವದ ಧೋರಣೆಯನ್ನು ಕಂಡ ಕನಕದಾಸರು ಇದನ್ನು ಸಹಿಸದೇ ಪ್ರಭುತ್ವದ ವಿರುದ್ಧ ತಿರುಗಿ ಬಿದ್ದರು. ಮೇಲ್ಜಾತಿಯ ಸಂಸ್ಕೃತಿಯ ವಿರುದ್ಧ ಅಧಿಕಾರಶಕ್ತಿಗಳ ವಿರುದ್ಧ, ಪ್ರಬಲ ಜಾತಿಗಳ ವಿರುದ್ಧ ಕನಕದಾಸರು ಬಂಡೆದ್ದಿರುವುದನ್ನು ಅವರ ಕೀರ್ತನೆ ಮತ್ತು ಕೃತಿಗಳನ್ನು ಅಧ್ಯಯನ ಮಾಡಿದಾಗ ತಿಳಿಯುತ್ತದೆ.

ಕನಕದಾಸರ "ಕಲಿಯೇರಿ ಬಂತು" ಕೀರ್ತನೆಯು ಪ್ರಬಲರು ಕೆಳವರ್ಗದವರನ್ನು ಯಾವ ರೀತಿ ತಮ್ಮ ರಾಜಕೀಯದಿಂದ, ಲೂಟಿ ಮಾಡಿ ವಂಚಿಸುತ್ತಿದ್ದರು ಎಂಬುದನ್ನು ನೋಡಬಹುದು.

ಅತ್ತೆಯೇ ಸೊಸೆಯಾಗಿ ಸೊಸೆಯು ಅತ್ತೆಯಾಗಿ
ಪುತ್ರ ಪಿತನಾಗಿ ಪಿತ ಪುತ್ರನಾಗಿ
ಮತ್ತೆ ಗಂಡನಿಗೆ ಹೆಂಡತಿಯ ಗಂಡನು ಆಗಿ
ವರ್ತಿಸುವರಯ್ಯ ತಮಗೆದುರಿಲ್ಲವೆಂದು.
ಅನ್ನವಸ್ತ್ರಗಳಿಂದ ಚೆನ್ನಾಗಿ ಬಾಳುವರ
ಛಿನ್ನ ತಂತ್ರವ ಮಾಡಿ ಕೆಡಿಸುತಿಹರು
ಸತ್ಯ ಧರ್ಮಗಳೆಲ್ಲ ಎತ್ತ ಪೋದವೋ ಕಾಣೆ
ಉತ್ತಮರ ಜೀವನಕೆ ದಾರಿಯಿಲ್ಲ.
ನಿತ್ಯದಲಿ ಕಳುವು-ವ್ಯಭಿಚಾರವುಳ್ಳವರೆಲ್ಲ

ಅರ್ಥ ಸಂಪದರಾಗಿ ಅನುಭವಿಸುತಿಹರು.
ಹರಿಹರರ ಪೂಜೆಗಳು ಹಗರಣಗಳಾದವು
ಉರಿಮೋರೆ ಚಾಮುಂಡಿ ಶಕ್ತಿಗಳಿಗೆ
ಕುರಿಕೋಣ ನೈವೇದ್ಯ ಧೂಪದೀಪಗಳಿಂದ
ಪರಮಭಕ್ತಿಯ ಮಾಡಿ ಪೂಜಿಸುವರಯ್ಯ"

ಈ ಕೀರ್ತನೆಯಲ್ಲಿ ಕನಕದಾಸರು ಭಕ್ತಿಯನ್ನು ದೇವಾಲಯಗಳನ್ನು ತಮಗೆ ಬೇಕಾದ ಸಂಪತ್ತು, ಸವಲತ್ತು, ಆಸ್ತಿ, ಆಧಿಕಾರವನ್ನು ಸಂಪಾದನೆ ಮಾಡಿಕೊಳ್ಳಲು ವ್ಯಾಪಾರಿ ಕೇಂದ್ರಗಳಾಗಿ ಮಾಡಿಕೊಂಡಿರುವ ಅಧಿಕಾರ ಬಲದವರನ್ನು, ಪುರೋಹಿತ ಸಮುದಾಯಗಳನ್ನು, ಧರ್ಮದ ನಾಯಕರನ್ನು ವಿರೋಧಿಸಿದ್ದಾರೆ. ಕೆಳಜಾತಿಗಳ ಜನರನ್ನು ಮೋಸ ಮಾಡಿ ಧರ್ಮದ ಹೆಸರಿನಲ್ಲಿ ಅವರನ್ನು ಲೂಟಿ ಮಾಡಿ ತಿನ್ನುತ್ತಿರುವ ಪ್ರಭುತ್ವದ ನೀಚ ಸಂಸ್ಕೃತಿಯನ್ನು ವಿರೋಧಿಸುವ ನೆಲೆಯಲ್ಲಿ "ಕಲಿಯೇರಿ ಬಂತು" ಕೀರ್ತನೆಯನ್ನು ಕನಕದಾಸರು ರಚಿಸಿರುವುದನ್ನು ಕಾಣಬಹುದು.

ಜ್ಞಾನವಿರುವ ಜನರೇ ಯಾವ ರೀತಿ ಜನರಲ್ಲಿ ಭಕ್ತಿಯ ನಶೆ ಏರಿಸಿ ಅಧಿಕಾರ ಪಡೆದು ಜನರನ್ನು ಯಾಮಾರಿಸುತ್ತಾರೆ ಎಂದು ಕನಕದಾಸರು ಈ ಕೆಳಗಿನ ಕೀರ್ತನೆಯಲ್ಲಿ ತುಂಬ ಚೆನ್ನಾಗಿ, ಮಾರ್ಮಿಕವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

''ಸತ್ತವನು ಉಣ್ಣುವನೆಂದು
ನಿತ್ಯ ಪಿಂಡ ವಿಕ್ಕುತ್ತೀರಿ
ಎಳ್ಳು ದರ್ಬೆ ಕೈಲಿ ಹಿಡಿದು
ಪಿತರ ತೃಪ್ತಿ ಪಡಿಸುತ್ತೀರಿ
ಎಳ್ಳು ಮೀನು ನುಂಗಿ ಹೋಯಿತು
ಮಂತ್ರಾಕ್ಷತೆಯ ಕೈಗೆ ಕೊಟ್ಟು
ಮೋಕ್ಷವನು ಹಾರೈಸುವಿರಿ
ಮಂತ್ರವೆಲ್ಲೊ ಅಕ್ಷತೆಯಲ್ಲೊ
ಹೇಳುವವನು ಅವಿವೇಕಿ
ಕೇಳುವವನು ಅಜ್ಞಾನಿ"

ಹುಟ್ಟು ಸಾವುಗಳ ಆಚರಣೆಯನ್ನು ಸೃಷ್ಟಿಸಿಕೊಂಡು ಆ ಮೂಲಕ ಜನರನ್ನು ನಂಬಿಸಿ ಅವರಲ್ಲಿ ಭಯವನ್ನು ತುಂಬಿ ಅಧಿಕಾರವನ್ನು ಚಲಾಯಿಸುವ, ಪ್ರಭುತ್ವದಂತೆ ವರ್ತಿಸುವ ಪುರೋಹಿತಶಾಹಿಯ ಕೆಟ್ಟ ಆಚರಣೆಗಳ ಸಂಸ್ಕೃತಿಯನ್ನು ಈ ಕೀರ್ತನೆಯಲ್ಲಿ ಕನಕದಾಸರು ತುಂಬ ಮಾರ್ಮಿಕವಾಗಿ ವಿವರಿಸಿ ವಿರೋಧಿಸಿದ್ದಾರೆ.

ಅಧಿಕಾರದಾಹಿ ಪ್ರಭುತ್ವಗಳು ಅಧಿಕಾರಕ್ಕಾಗಿ ಸಂಬಂಧಗಳನ್ನು ಕಳೆದುಕೊಂಡು ದೂರ ಮಾಡಿಕೊಂಡು ದ್ವೇಷ ಮಾಡುತ್ತ ಬದುಕುತ್ತವೆ ಎಂಬುದನ್ನು ಕನಕದಾಸರು ಕೆಳಕಂಡ ಕೀರ್ತನೆಯಲ್ಲಿ ಹೇಳಿದ್ದಾರೆ.

“ಜನಕ ಹಿತದವನೆಂದು ನಂಬಬಹುದೇ ಹಿಂದೆ
ತನಯ ಪ್ರಹ್ಲಾದನಿಗೆ ಪಿತ ಮುನಿದನು
ಜನನಿ ರಕ್ಷಿಪಳೆಂತೆಂಬೆನೇ ಆ ಕುಂತಿ
ತನಯ ರಾಧೇಯನಿಗೆ ಎರಡೆಣಿಸಿದ ಮೇಲೆ
ಮಗನು ತೆತ್ತಿಗನೆನಲೆ ಕಂಸ ತನ್ನಯ ಪಿತನ
ನಿಗಳ ಬಂಧನದಿಂದ ಬಂಧಿಸಿದನು
ಜಗವರಿಯೇ ಸೋದರನು ಮಮತೆಯುಳವನೆನಲೆ
ಹಗೆವರೆಸಿ ವಾಲಿಯನು ಅನುಜ ಕೊಲಿಸಿದ ಮೇಲೆ
ತನಗೆ ದೇಹಾನುಬಂಧಗಳೇ ಬಂಧುಗಳೆಂದು
ಮನದಿ ನಿಚ್ಚಳವಾಗಿ ನಂಬಬೇಡ
ಆರು ಹಿತದವರೆಂದು ನಂಬಬೇಡ”

ಈ ಕೀರ್ತನೆಯಲ್ಲಿ ಕನಕದಾಸರು ವಾಲಿ, ಸುಗ್ರೀವ, ಕರ್ಣ ಕುಂತಿ ಮೊದಲಾದ ಪುರಾಣ ಪಾತ್ರಗಳ ಮೂಲಕ ರಾಜಕೀಯ ವಿಚಾರಗಳನ್ನು ಚರ್ಚಿಸಿದ್ದಾರೆ. ಪ್ರಭುತ್ವಶಾಹಿಗಳು ಯಾವ ರೀತಿ ಅಧಿಕಾರಕ್ಕಾಗಿ ತಂತ್ರ, ಪಿತೂರಿ, ಹುನ್ನಾರಗಳನ್ನು ನಡೆಸಿ ಅಧಿಕಾರಗಳಿಸುತ್ತಾರೆ ಎಂಬುದನ್ನು ಈ ಕೀರ್ತನೆಯಲ್ಲಿ ಚರ್ಚಿಸುತ್ತಲೇ ಇಂತಹ ಮತಿಹೀನ ಪ್ರಭುತ್ವದಿಂದ ಯಾವ ಉಪಯೋಗವೂ ಇಲ್ಲ ಎಂದು ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

ಕನಕದಾಸರು ‘ಗಳಿಸದಿರು ಸೀಮೆಯನು ಗಳಿಸದಿರು ದ್ರವ್ಯವನು’ ಎಂಬ ಮಾತನ್ನು ತಮ್ಮ ಕೀರ್ತನೆಯಲ್ಲಿ ಆಡಿದ್ದಾರೆ. ಈ ಸಾಲುಗಳು ಅಧಿಕಾರದ ನಶ್ವರತೆಯನ್ನು ಪ್ರತಿನಿಧಿಸುತ್ತಿವೆ. ಇಲ್ಲಿ ಕಂಡುಬರುವ ‘ಸೀಮೆ’ ಎಂಬ ಪದವು ಅಂದರೆ ಭೂಮಿ ದ್ರವ್ಯ ಅಂದರೆ ಹಣ ಇವೆರಡು ಪ್ರಭುತ್ವದ ಎರಡು ಮುಖ್ಯ ಅಂಗಗಳಾಗಿವೆ. ಇವುಗಳ ನಶ್ವರತೆಯನ್ನು ಪ್ರತಿಪಾದಿಸುವ ಕನಕದಾಸರ ಕೀರ್ತನೆ ಈ ಕೆಳಗಿನಂತಿದೆ.

“ಹತ್ತು ಎಂಟು ಲಕ್ಷ ಎಣಿಸಿ ಮತ್ತೆ ಸಾಲದೆಂದು ಪರರ
ಅರ್ಥಕ್ಕಾಗಿ ಆಸೆಪಟ್ಟು ಸುಳ್ಳು ನ್ಯಾಯ ಮಾಡ್ವರು
ಚಿತ್ತಿ ಬೆಳೆದು ತನ್ನದೆಂಬ ವ್ಯರ್ಥ ಚಿಂತೆಯನ್ನು ಮಾಡೆ
ಸತ್ತು ಹೋದ ಮೇಲೆ ಅರ್ಥ ಯಾರಿಗಾಹುದೋ”

ಇಲ್ಲಿ ಅಧಿಕಾರದ ಭಾಗವಾಗಿರುವ ಜಮೀನ್ದಾರಿ ವ್ಯವಸ್ಥೆಯನ್ನು ಕನಕರು ತರಾಟೆಗೆ ತೆಗೆದುಕೊಂಡಿದ್ದಾರೆ. ಅವರ ಯಜಮಾನ್ಯವನ್ನು ಟೀಕಿಸಿದ್ದಾರೆ. ಎಷ್ಟೆಲ್ಲ ದರ್ಪಮಾಡಿ ದುಡಿಯದೇ ದುಡಿದವರ ಮೇಲೆ ದಬ್ಬಾಳಿಕೆ ಮಾಡಿ ಹಣಗಳಿಸಿದರೆ ಸತ್ತ ಮೇಲೆ ಅದು ನಿನ್ನ ಜೊತೆ ಬರಲ್ಲ ಎಂದು ಕೊನೆಯಲ್ಲಿ ಆದ್ಯಾತ್ಮಿಕವಾಗಿ ಹಣದ ನಶ್ವರತೆ ಬಗೆಗೆ ಬರೆದಿದ್ದಾರೆ.

ಕನಕದಾಸರು ರಚಿಸಿದ ವಿಶಿಷ್ಟವಾದ ಕೃತಿಯಾದ 'ರಾಮಧಾನ್ಯ ಚರಿತ್ರೆ' ಯು ಮಾದರಿ ಪ್ರಭುತ್ವ ಹೇಗಿರಬೇಕು ಎಂದು ಸೂಚಿಸುವ ಕೃತಿಯಾಗಿದೆ. ರಾಜನಾದವನ ಕರ್ತವ್ಯವೇನು? ಅವನು ಯಾರ ಪರವಾಗಿರಬೇಕು? ಅವನ ಧೋರಣೆಗಳು ಯಾವ ರೀತಿಯಾಗಿರಬೇಕು? ಅರಸನು ಬದುಕುವ ಕ್ರಮ ಯಾವ ರೀತಿಯಲ್ಲಿರಬೇಕು ಎಂದು ತೋರುವ ಮಹತ್ವದ ಕೃತಿಯಾಗಿದೆ. "ರಾಮಧಾನ್ಯ ಚರಿತ್ರೆ" ಕೃತಿಯ ವಸ್ತು ಜನಸಾಮಾನ್ಯರನ್ನು ಪ್ರತಿನಿಧಿಸುವ ಹಾಗೆ ಕನಕದಾಸರು ಕೃತಿಯನ್ನು ರಚಿಸಿದ್ದಾರೆ. ಯಾರೂ ಕನಿಷ್ಠರಲ್ಲ, ಯಾರೂ ಶ್ರೇಷ್ಠರಲ್ಲ ಎಂಬ ತತ್ವವನ್ನು ಇಟ್ಟುಕೊಂಡು ಜಾತಿ, ಮತ, ಧರ್ಮ ಎಂದು ಬದುಕದೇ ಮಾನವೀಯತೆಯೇ ಬದುಕು, ಸಮರಸವೇ ಜೀವನ ಎಂಬ ತತ್ವವನ್ನು ಇಟ್ಟುಕೊಂಡು ಬದುಕುವುದು ಮುಖ್ಯ ಎಂದು ಕನಕದಾಸರು ಈ ಕೃತಿಯ ಮೂಲಕ ನಿರೂಪಿಸಿದ್ದಾರೆ.

ಪ್ರಭುತ್ವವು ಯಾವಾಗಲು ಜನ ಸಾಮಾನ್ಯ ಪರವಾಗಿರಬೇಕು. ದಲಿತ ದಮನಿತರ ಧ್ವನಿಯಾಗಿ ಪ್ರಭುತ್ವ ಕೆಲಸ ಮಾಡಬೇಕು. ಶೋಷಣೆ, ಅವಮಾನ, ಅಪಮಾನ, ನಿಂದನೆಗೆ ಒಳಗಾಗಿ ದಿಕ್ಕೆಟ್ಟು ನಿಂತಿರುವ ಸಂತ್ರಸ್ತರ ಪರವಾಗಿ ಪ್ರಭುತ್ವ ನಿಂತರೆ ದಬ್ಬಾಳಿಕೆ ಮಾಡುವವರು ಉಸಿರಾಡದೇ ಸುಮ್ಮನಿರುತ್ತಾರೆ. ಅದು ಬಿಟ್ಟು ಪ್ರಭುತ್ವ ಶೋಷಣೆ ಮಾಡುವವರ ಪರವಾಗಿ ಬಲಿಷ್ಠರ ಪರವಾಗಿ, ಶ್ರೀಮಂತರ ಪರವಾಗಿ ನಿಂತು ಕೆಲಸ ಮಾಡಿದರೆ ಅವನನ್ನೇ ನಂಬಿರುವ ಸಾಮಾನ್ಯ ಪ್ರಜೆಗಳನ್ನು ಕಾಪಾಡಲು ಯಾರು ಬರುತ್ತಾರೆ. ಹಾಗಾಗಿ ಪ್ರಜೆಗಳು ತನ್ನ ಮೇಲೆ ಇಟ್ಟು ಇಟ್ಟುಕೊಂಡಿರುವ ನಂಬಿಕೆ, ವಿಶ್ವಾಸ, ಪ್ರೀತಿ, ಪ್ರಾಮಾಣಿಕತೆಯನ್ನು ಕಳೆದುಕೊಳ್ಳದೇ ರಾಜನಾದವನು ನೊಂದವರ ಪರವಾಗಿ ಇರಬೇಕು ಎಂಬುದನ್ನು "ರಾಮಧಾನ್ಯ ಚರಿತ್ರೆ" ಕೃತಿಯು ನಿರೂಪಿಸುತ್ತದೆ. "ಇತಿಹಾಸದುದ್ದಕ್ಕೂ ಎಷ್ಟೋ ಸಲ ಪ್ರಭುತ್ವ ವ್ಯವಸ್ಥೆ ಎಡವಿದಾಗಲೆಲ್ಲ ಅವುಗಳ ವಿರುದ್ಧ ಸೃಜನಶೀಲ ಮನಸ್ಸುಗಳು ಬಲವಾಗಿ ತಮ್ಮ ಚಾಟಿ ಬೀಸಿವೆ. ಸಾಮ, ಭೇದ, ದಂಡೋಪಾಯಗಳ ಅಸ್ತ್ರಗಳನ್ನು ಬಳಸಿವೆ. ಚಳುವಳಿಯೋಪಾದಿಯಲ್ಲಿ ಪ್ರತಿಭಟನೆಗೂ ಇಳಿದಿವೆ. ಹಾಗೇಯೇ ಶಾಂತಿಯುತವಾಗಿ ತಣ್ಣನೇಯ ದನಿಯಲ್ಲಿ ಪ್ರತಿಭಟಿಸುತ್ತಲೇ ಸಾಮರಸ್ಯದ ಹಾದಿಯನ್ನು ತೋರಿಸಿವೆ ಕನಕದಾಸರದು ಈ ಕೊನೆಯ ಹಾದಿ" ರಾಮಧಾನ್ಯ ಚರಿತ್ರೆಯಲ್ಲಿ ಕೊನೆಯಲ್ಲಿ ಕನಕದಾಸರು ಸಾಮರಸ್ಯವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಭತ್ತ ಮತ್ತು ರಾಗಿ ಧಾನ್ಯಗಳನ್ನೇ ಕಾವ್ಯದ ಪ್ರಮುಖ ಪಾತ್ರಗಳನ್ನಾಗಿ ಮಾಡಿ ಅವುಗಳ ಮೂಲಕವೇ ರಾಜ ಯಾರ ಪರವಾಗಿ ಕೆಲಸ ಮಾಡಬೇಕು ಎಂಬುದನ್ನು ಕನಕದಾಸರು ಈ ಕಾವ್ಯದಲ್ಲಿ

ನಿರೂಪಿಸಿದ್ದಾರೆ. ಭತ್ತ ಪ್ರತಿಷ್ಠಿತರ, ಮೇಲ್ವರ್ಗದ ಜನರ, ಶ್ರೀಮಂತರ ರಾಜರ ಪ್ರತಿನಿಧಿಯಾಗಿದ್ದರೆ. ರಾಗಿಯು ಬಡವರ ಸಾಮಾನ್ಯರ ಪ್ರತಿನಿಧಿಯಾಗಿ ಈ ಕಾವ್ಯದಲ್ಲಿ ಮೂಡಿ ಬಂದಿವೆ. ಶ್ರೀಮಂತರು ರಾಗಿ, ನವಣೆ, ಹಾರಕ ಮೊದಲಾದ ಬಡವರ ಪರವಾಗಿದ್ದ ಧಾನ್ಯಗಳನ್ನು ಕೀಳಾಗಿ ಕಾಣುತ್ತಿದ್ದರು. ಅದನ್ನೇ ಭತ್ತದ ಮುಖಾಂತರ ಕಾವ್ಯದಲ್ಲಿ ಕನಕದಾಸರು ತಂದಿದ್ದಾರೆ. ಯಾವ ಧಾನ್ಯ ಶ್ರೇಷ್ಠ? ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಸಾಗುವ ಕಾವ್ಯದಲ್ಲಿ ಎಲ್ಲರೂ ವಿವಿಧ ಬಗೆಯ ಉತ್ತರಗಳನ್ನು ನೀಡುತ್ತಾರೆ. ಕೊನೆಯಲ್ಲಿ ಗೌತಮ ಋಷಿಗಳು ರಾಗಿಯೇ ಶ್ರೇಷ್ಠ ಧಾನ್ಯ ಎಂದು ಹೇಳುತ್ತಾರೆ. ಇದನ್ನು ಕೇಳಿ ಸಿಟ್ಟಾದ ಭತ್ತವು ವಾದ ಮಾಡಲು ಇಳಿಯುತ್ತದೆ. ತಾನೇ ಶ್ರೇಷ್ಠ ರಾಗಿಯು ಕನಿಷ್ಠ ಎಂದು ಒಣಜಂಭ ತೋರುತ್ತದೆ. ಹೀಗೆಯೇ ಭತ್ತದ ಮುಖಾಂತರ ಕನಕದಾಸರು ಉಚ್ಚ ಜಾತಿಯವರ ನಯವಂಚಕತನವನ್ನು ಬಯಲಿಗೆಳೆಯುತ್ತಾರೆ. ಭತ್ತವು ಸುಮ್ಮನಿರದೇ ರಾಗಿಯನ್ನು ಕೆಣಕುತ್ತದೆ. ಚುಚ್ಚುಮಾತುಗಳನ್ನು ಆಡುತ್ತದೆ. ಕೊಂಕು ಮಾತುಗಳನ್ನು ಆಡಿ ನೋಯಿಸುತ್ತದೆ. ನೀನು ಕುಲಹೀನ, ಮತಹೀನ, ನಿಕೃಷ್ಟ ಎಂದು ರಾಗಿಯನ್ನು ದೂಷಣೆ ಮಾಡುತ್ತದೆ. ಜೊತೆಗೆ ತನ್ನನ್ನು ತಾನು ಶ್ರೇಷ್ಟವೆಂದು ವರ್ಣಿಸಿಕೊಳ್ಳುತ್ತದೆ.

ಪರಿಮಳವನ್ನು ಹೊರಸೂಸುವ ಶ್ರೀಗಂಧದ ಮರಕ್ಕೆ ಒಣಗಿದ ಕಟ್ಟಿಗೆ ಸರಿಯಾಗುವುದೇ? ಗೋವು ಕರೆದ ಅಮೃತದಂತಹ ಹಾಲಿಗೆ ಕುರಿ ಹಾಲು ಸಮವೇ? ಆ ಜಲಧಿಯನೇ ಜಿಗಿದ ಸಾಹಸವೀರ ಹನುಮನಿಗೆ ಮರದ ಮೇಲಿರುವ ಮಂಗ ಸಮಾನವೇ? ಮುಂತಾಗಿ ಭತ್ತವು ರಾಗಿಯನ್ನು ಜರಿಯುತ್ತ ಹಂಗಿಸುತ್ತದೆ. ಈ ಮೂಲಕ ಉಚ್ಚ ಕುಲದವರು, ಶ್ರೇಷ್ಠ ಕುಲದವರು, ಬಡವರ ಮೇಲೆ ಯಾವ ರೀತಿ ಪ್ರಹಾರ ಮಾಡುತ್ತಿದ್ದರು ಎಂಬುದನ್ನು ಕನಕದಾಸರು ಭತ್ತದ ಅಹಂಕಾರ ಮೂಲಕ ನಿರೂಪಿಸಿದ್ದಾರೆ. ಆಗಿನ ಕಾಲದಲ್ಲಿ ಜನಸಾಮಾನ್ಯರು ತಮ್ಮ ಮೇಲೆ ಎಷ್ಟೆ ದೌರ್ಜನ್ಯ ನಡೆದರೂ ಬಾಯಿ ಮುಚ್ಚಿಕೊಂಡು ಇರಬೇಕಾಗಿತ್ತು. ಪ್ರತಿರೋಧಿಸುವ ಹಾಗಿರಲಿಲ್ಲ. ಆದರೆ ಈ ಕಾವ್ಯದಲ್ಲಿ ಕನಕದಾಸರು ರಾಗಿಗೆ ದನಿಯನ್ನು ನೀಡಿದ್ದಾರೆ. ಪ್ರತಿರೋದಿಸುವ ಕಲೆಯನ್ನು ಚಿತ್ರಿಸಿದ್ದಾರೆ. ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಸುಮ್ಮನಿರಬಾರದು ಪ್ರತಿರೋಧ ತೋರಬೇಕು ಎಂಬ ತತ್ವವನ್ನು ರಾಗಿಯ ಪಾತ್ರದ ಮುಖಾಂತರ ಚಿತ್ರಿಸಿರುವ ಕನಕದಾಸರು ರಾಗಿಯು ಭತ್ತದ ಮೇಲೆ ಸಿಟ್ಟಿಗೆದ್ದು ತರಾಟೆಗೆ ತೆಗೆದುಕೊಳ್ಳವಂತೆ ಮಾಡಿದ್ದಾರೆ. ರಾಗಿಯು ಕೂಡ ಭತ್ತವನ್ನು ದೂಷಣೆ ಮಾಡುತ್ತದೆ. ಬಡವರನ್ನು ಕಣ್ಣೆತ್ತಿ ನೋಡದ ಶ್ರೀಮಂತರ ಬೆನ್ನತ್ತಿ ಹೋಗುವ ನೀನು ಯಾವ ರೀತಿಯ ಶ್ರೇಷ್ಠ. ನೀನು ನಿರರ್ಥಕ ಧಾನ್ಯ, ಎಂದು ಮೂದಲಿಸುತ್ತದೆ.

ಹೀಗೆ, ಶ್ರೀಮಂತರ ಉಚ್ಛ ಕುಲದವರ ಪ್ರತಿನಿಧಿಯಾದ ಭತ್ತ ಹಾಗೂ ಬಡವರ, ದಲಿತರ, ಶೋಷಿತರ, ದೌರ್ಜನ್ಯಕ್ಕೆ ತುತ್ತಾದವರ ಪ್ರತಿನಿಧಿಯಾದ ರಾಗಿಯ ನಡುವಿನ ವಾದ ವಿವಾದವನ್ನು ಆಲಿಸುವ ಪ್ರಭುತ್ವ ರಾಮ ಸರಿಯಾದ ನ್ಯಾಯ ನೀಡಬೇಕೆಂದು ನಿಶ್ಚಯಿಸಿ ಎರಡು ಧಾನ್ಯಗಳನ್ನು ಆರು

ತಿಂಗಳು ಸೆರೆಮನೆಯಲ್ಲಿಡುತ್ತಾನೆ. ಆರು ತಿಂಗಳ ಅನಂತರ ಇವುಗಳ ಪೌರುಷ ನೋಡಿ ಯಾರು ಶ್ರೇಷ್ಠ ಎಂದು ತೀರ್ಮಾನ ಮಾಡುತ್ತೇನೆ ಎಂದು ಘೋಷಿಸುತ್ತಾನೆ. ಈ ಮೂಲಕ ಪ್ರಭುತ್ವದ ನಡೆ ಯಾವ ರೀತಿಯಲ್ಲಿ ಇರಬೇಕು ಎಂದು ಕನಕದಾಸರು ತೋರಿಸಿದ್ದಾರೆ. ಆರು ತಿಂಗಳ ಅನಂತರ ನೋಡಿದಾಗ ಭತ್ತವು ಕಳೆಗುಂದಿರುತ್ತದೆ. ರಾಗಿಯು ಕಳೆಗುಂದದೇ ತನ್ನ ಕಾಂತಿಯನ್ನು ಹಾಗೆಯೇ ಉಳಿಸಿ ಕೊಂಡಿರುತ್ತದೆ. ಹಾಗಾಗಿ ರಾಮ ರಾಗಿಯೇ ಶ್ರೇಷ್ಠ ಧಾನ್ಯ ಎಂದು ಘೋಷಿಸುತ್ತಾನೆ. ಈ ಮೂಲಕ ಪ್ರಭುತ್ವವು ಜನಸಾಮಾನ್ಯರ ಪರವಾಗಿ ಪ್ರಾಮಾಣಿಕವಾಗಿರಬೇಕು ಎಂದು ಕನಕದಾಸರು ನಿರೂಪಿಸಿದ್ದಾರೆ. ಮೇಲುಜಾತಿಯವರ, ಮೇಲ್ವರ್ಗದವರ ಪರವಾಗಿ ನಿಲ್ಲುವ ಪ್ರಭುತ್ವವನ್ನು ಪರೋಕ್ಷವಾಗಿ ಪ್ರತಿರೋಧಿಸಿರುವ ಕನಕದಾಸರು ಪ್ರಭುತ್ವದ ನಿಲುವು, ಧೋರಣೆಗಳು ಯಾರ ಪರವಾಗಿರಬೇಕು ಹೇಗಿರಬೇಕು ಎಂಬುದನ್ನು "ರಾಮಧಾನ್ಯ ಚರಿತ್ರೆ"ಯಲ್ಲಿ ಹೇಳಿದ್ದಾರೆ. ಅಧಿಕಾರವನ್ನು ಹೊಂದಿರುವವರು ಕೇವಲ ಒಂದು ಜಾತಿಯ, ಒಂದು ಗುಂಪಿನ, ವರ್ಗದವರ ಪರವಾಗಿ ನಿಲ್ಲದೇ ಸೃಜನ ಪಕ್ಷಪಾತ ಮಾಡದೇ ಎಲ್ಲರ ಬಗೆಗೆ, ಎಲ್ಲದರ ಕಡೆ ಗಮನ ನೀಡಿ ಪ್ರಾಮಾಣಿಕವಾಗಿ ಆಡಳಿತ, ನ್ಯಾಯ ನೀಡಬೇಕು ಎಂಬುದನ್ನು ಕನಕದಾಸರು 'ರಾಮಧಾನ್ಯ ಚರಿತ್ರೆ' ಕಾವ್ಯದ ಮೂಲಕ ಮಾದರಿ ಪ್ರಭುತ್ವದ ಕಥನವನ್ನು ಅದ್ಭುತವಾಗಿ ನಿರೂಪಿಸಿದ್ದಾರೆ.

ರಾಮಧಾನ್ಯ ಚರಿತ್ರೆಯಲ್ಲಿ ಕಂಡುಬರುವ ನರೆದಲೆಗ' ಮೇಲುವರ್ಗದವರ, ಪ್ರಭುತ್ವಶಾಹಿಯವರ ಶೂದ್ರನಾಗಿ ಬದುಕಬೇಕಾದ ಸ್ವತಃ ಕನಕದಾಸರ ವ್ಯಕ್ತಿತ್ವದ ಪ್ರತೀಕದಂತಿದೆ. ನೆಲ್ಲು ಕನಕದಾಸರನ್ನು ನಡೆಸಿಕೊಳ್ಳುತ್ತಿದ್ದ ಪ್ರಭುತ್ವದ ಪ್ರತಿಕವಾಗಿದೆ. "ಬುಧರು ಜರೆದು ನಿರಾಕರಿಸಿ ಬಿಡಲಂತು ಶೂದ್ರಾನ್ನವಾದೆಯಲ್ಲಾ" ಎಂದು ಪ್ರಭುತ್ವದ ಪ್ರತೀಕವಾಗಿರುವ ನೆಲ್ಲು ಅಹಂಕಾರದಿಂದ ನುಡಿದಾಗ ಅದಕ್ಕೆ ಪ್ರತಿಯಾಗಿ "ಸತ್ವಹೀನನು ಬಡವರನು ಕಣ್ಣೆತ್ತಿನೋಡೆ ಧನಾಢ್ಯರನು ಬೆಂಬೆತ್ತಿ ನಡೆವ ಉಪೇಕ್ಷೆ ನಿನ್ನದು" "ನಮ್ಮಲಿ ಸಲ್ಲದೀಪರಿ ಪಕ್ಷಪಾತವದಿಲ್ಲ ಭಾವಿಸಲು ಬಲ್ಲದರು ಬಡವರುಗಳೆನ್ನದೆ ಎಲ್ಲರನು ರಕ್ಷಿಸುವೆ ನಿರ್ದಯನಲ್ಲ ನಿನ್ನಂತೆ, ಎಲೆ ಕುಟಿತಾತ್ಮ ಹೋಗೆಂದ" ಎಂದು ನರೆದೆಲಗ ಅರ್ಥಪೂರ್ಣವಾಗಿ ಪ್ರತಿಕ್ರಿಯೆ ನೀಡುತ್ತದೆ.

"ನಳ ಚರಿತ್ರೆ ಕಾವ್ಯದಲ್ಲಿ ಕನಕದಾಸರು ತಮ್ಮ ಸಾಮಾಜಿಕ ಪ್ರಜ್ಞೆಯನ್ನು, ಪ್ರಭುತ್ವದ ಬಗೆಗಿನ ಧೋರಣೆಯನ್ನು ಬೇರೆ ಕಾವ್ಯಗಳಗಿಂತ ಇನ್ನೂ ಹೆಚ್ಚು ಪ್ರಚ್ಛನ್ನವಾಗಿಯೇ ಚಿತ್ರಿಸಿದ್ದಾರೆ. ಸಾಮಾಜಿಕ ಬದುಕಿನ ನೆಲೆಯಲ್ಲಿಯೇ ನಿಂತು ಆ ಸಮಾಜದ ಅನುಭವದ ಅನ್ವೇಷಣೆಯನ್ನು ಈ ಕೃತಿಯಲ್ಲಿ ತೊಡಗಿಸಿದ್ದಾರೆ. ಸಾಮಾಜಿಕ ವಿಕ್ಷಿಪ್ತ ನೆಲೆಗಳನ್ನು, ವರ್ಗ ಪ್ರಜ್ಞೆಯ ಒಳನೋಟವನ್ನು ಕಟ್ಟಿಕೊಟ್ಟಿದ್ದಾರೆ. ಮಹಾಭಾರತದ ವನಪರ್ವದಲ್ಲಿ ಬರುವ ಇಪ್ಪತ್ತೆಂಟು ಅಧ್ಯಾಯಗಳನ್ನು ಒಳಗೊಂಡ ಕಥೆಯನ್ನು ಒಂಬತ್ತು ಸಂಧಿಗಳಲ್ಲಿ ಕನಕದಾಸರು "ನಳ ಚರಿತ್ರೆ"ಯನ್ನಾಗಿಸಿದ್ದಾರೆ. "ಪ್ರಭುವಾದವನು ತನ್ನ ಪ್ರಜೆಗಳ ಕಷ್ಟ ಸುಖಗಳನ್ನು ಆಲಿಸಬೇಕಾದವನು ಕ್ಷಣ ಮೈಮರೆತು ಲೋಲು ಪತೆಯಲ್ಲಿ ಮುಳುಗಿದನೋ

ಅವನಿಗೆ ಕಷ್ಟ ಕಟ್ಟಿಟ್ಟ ಬುತ್ತಿ. ಅಲ್ಲಿ ವಿಧಿಯ ಪರೀಕ್ಷೆಯೋ ಮುಂದೆ ಬಂದು, ಆತನೂ ಸಾಮಾನ್ಯರಲ್ಲಿ ಸಾಮಾನ್ಯನಂತೆ ಬದುಕಿ ಪ್ರಜೆಗಳ ಕಷ್ಟಗಳನ್ನೆಲ್ಲ ತಾನೂ ಅನುಭವಿಸಿ ಅರಿತು ಪರೀಕ್ಷೆಯಲ್ಲಿ ಬೆಂದು. ಪಕ್ವಗೊಂಡು ಕಷ್ಟ ಕಳೆದು ಮತ್ತೆ ಸಿಂಹಾಸನವನ್ನೇರುವುದು ಇರುತ್ತದೆ. ಸುಖಾಂತ್ಯವಿದ್ದರೂ ನಡುವಿನ ದುಃಖ ವಿರಹ ಕಡುಕಷ್ಟಕೋಟಲೆಗಳನ್ನು ಪ್ರಭುವಾದವನು ಎದುರಿಸಬೇಕು ಅಥವಾ ಅರಿತು ಜವಾಬ್ದಾರಿಯಿಂದ ವರ್ತಿಸಬೇಕೆಂಬುದನ್ನು ಸಾರುತ್ತವೆ". ಹಾಗೆಯೇ ನಳಚರಿತ್ರೆ ಕತೆಯಲ್ಲೂ ಕನಕದಾಸರು ಪ್ರಭುವಿನ ವ್ಯಕ್ತಿತ್ವ ಹೇಗಿರಬಾರದು, ಹೀಗಿರಬೇಕು ಎಂಬುದಕ್ಕೆ ಸಾಕ್ಷಿಯಾಗಿ ನಳನ ಅನೇಕ ಗುಣಗಳನ್ನು ಕೃತಿಯಲ್ಲಿ ಚಿತ್ರಿಸಿದ್ದಾರೆ. ಈ ಕಾವ್ಯದಲ್ಲಿ ಬರುವ ಇಂದ್ರಿಯ ದೇವತೆಗಳು ಪ್ರಭುತ್ವದ ಸಂಕೇತವಾಗಿ ಕಾಣಿಸಿಕೊಂಡಿದ್ದಾರೆ. ನಳ ದಯಮಂತಿಯರು ಕೆಳವರ್ಗದ ಸಂಕೇತವಾಗಿ ಕಾಣಿಸಿಕೊಂಡಿದ್ದಾರೆ. ಇಂದ್ರ ತನ್ನ ಬೆಂಬಲಿಗರೊಂದಿಗೆ ದಯಮಂತಿಯನ್ನು ತನ್ನತ್ತ ಒಲಿಸಿಕೊಳ್ಳಲು ಮಾಡುವ ಸಂಚು ನಡೆಸಿದ ಪಿತೂರಿಗಳೆಲ್ಲ ವಿಷಯಾಸಕ್ತಿಗಾಗಿ ಕೆಳವರ್ಗದವರನ್ನು ಪ್ರಭುತ್ವವು ಯಾವ ರೀತಿ ಶೋಷಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

ಕನಕದಾಸರು ಪುರಾಣದ ವ್ಯಕ್ತಿಗಳನ್ನು ಹಾಗೂ ರಾಜರನ್ನು ಕುರಿತು ಕತೆ ಹೇಳುತ್ತಾರಾದರೂ ಅಂತಹ ಕತೆಗಳನ್ನು ಬರೆದದ್ದು ಮಾತ್ರ ಮಠಗಳಿಗಾಗಿಯೋ, ರಾಜರಾಗಿಯೋ, ರಾಜಾಸ್ಥಾನದಲ್ಲಿರುವ ಇನ್ನಿತರ ಕವಿಗಳನ್ನು ಮೆಚ್ಚಿಸಲೆಂದೋ ಅಲ್ಲ ಎಂಬುದು ಗಮನಾರ್ಹ ಕನಕದಾಸರು ಪುರಾಣ ಪ್ರಸಿದ್ಧ ವ್ಯಕ್ತಿ ಹಾಗೂ ರಾಜರ ಕತೆ ಹೇಳುವುದೇ ಜನಸಾಮಾನ್ಯರ ತಿಳುವಳಿಕೆಯನ್ನು ಹೆಚ್ಚಿಸಲು, ಪ್ರಭುತ್ವ ವ್ಯವಸ್ಥೆಯಿದ್ದಾಗಲೂ ಆಳುವ ಮತ್ತು ಆಳಿಸಿಕೊಳ್ಳುವ ಜನರ ರೀತಿ-ನೀತಿಗಳು ಹೇಗಿರಬೇಕೆಂಬುದನ್ನು ತೋರಿಸಿಕೊಡಲು, ಪ್ರಭುತ್ವವೆಂಬ ರಾಜ್ಯ ವ್ಯವಸ್ಥೆಯನ್ನು ಕವಿಯೊಬ್ಬ ಬದಲಿಸಲಾಗದಿದ್ದರೂ, ಇರುವ ವ್ಯವಸ್ಥೆಯಲ್ಲಿ ಎಲ್ಲ ವರ್ಗದವರೂ ಸಮನ್ವಯತೆಯಿಂದ ಬದುಕುವ ಮಾರ್ಗವನ್ನು ತೋರುವ ಕೆಲಸವನ್ನು ಕನಕದಾಸರು ಮಾಡಿರುವಂತಿದೆ". ಈ ಕಾವ್ಯದಲ್ಲಿ ಹಂಸ ಮತ್ತು ನಳನ ನಡುವೆ ಸಂವಾದದ ಭಾಗ ಬರುತ್ತದೆ. ಅಧಿಕಾರದ ಮತ್ತು ಪ್ರಭುತ್ವದ ಸ್ಥಾನದಲ್ಲಿ ನಳನನ್ನು ಮತ್ತು ಜನಸಾಮಾನ್ಯರ ಜಾಗದಲ್ಲಿ ಹಂಸ ಪಕ್ಷಿಯನ್ನು ನಾವು ಗುರುತಿಸಿಕೊಳ್ಳಬಹುದು. ನಳ ಬೇಟೆಯ ಸಂದರ್ಭದಲ್ಲಿ ಕೊಳದಲ್ಲಿದ್ದ ಸುಂದರವಾದ ಹಂಸಪಕ್ಷಿಯನ್ನು ಹಿಡಿಯಲು ಹೋದಾಗ ಹಂಸಪಕ್ಷಿಯ ಪ್ರತಿಕ್ರಿಯೆ ಹೀಗೆದೆ;

"ಒದರಿಕುಣಿಯಲು ಹಸ್ತದೊಳಗದ
ಕದಲದಂತಿರೆ ಪಿಡಿಯಲರಸನ
ವದನ ಕಮಲವ ನೋಡಿ ಹೆದರಿತು ಬಹಳ ಭೀತಿಯಲಿ
ಹೃದಯ ಕರಗುವ ಮಾತನೆಂದುದು
ಮದಕರಿಗೆ ನೊರಜಂತರವೆಕ್ಕೆ
ಸದರದವರನು ಕೊಲುವುದೇನರಿದೆಂದುದಾಪಕ್ಷಿ

ಅರಿಭಯಂಕರ ಶತೃಗಳ ಸಂ

ಹರಿಸುವುದು ನೃಪನೀತಿ ನಿನಗಿದು

ತರವೆ ಬಿಡು ಪರ ಹಿಂಸೆ ದೋಷವಿದೆಂದುದಾ ಪಕ್ಷಿ

ಒಡಲಿಗಾಪ್ಯಾಯನವೇ ಕೇಳಲೆ.

ಪೊಡವಿ ಪತಿ ಬಿಡು ನನ್ನ ಮನೆಯಲಿ

ಮಡದಿ ಸುತರುಮ್ಮಳವ ನೋಡೆಂದೊರಲಿತಾ ಪಕ್ಷಿ"

ಎಂದು ಪಕ್ಷಿಯು ನಳನನ್ನು ಆ ಮೂಲಕ ಅವನ ಅಧಿಕಾರವನ್ನು ಪ್ರಭುತ್ವವನ್ನು ಪ್ರಶ್ನಿಸುತ್ತದೆ. ಸುರೇಶ ನಾಗಲಮಡಿಕೆಯವರು ಹಂಸಪಕ್ಷಿಯ ಪ್ರತಿಕ್ರಿಯೆಯ ಕುರಿತು' ಕನಕನ ಲೋಕಗ್ರಹಿಕೆ ಪಕ್ವಗೊಂಡಿರುವುದೇ ಇರಿದ ಜಾಗಗಳಲ್ಲಿ, ಅಸಹಾಯಕದ ಮೇಲೆ ಬಡವರ ಮೇಲೆ ಯಜಮಾನ್ಯ ಅಥವಾ ಪ್ರಭುತ್ವ ಸವಾರಿಯನ್ನು ಪಕ್ಷಿ ವಿರೋಧಿಸುತ್ತದೆ. ಕೋಲ್ಲುವುದು; ಪರಹಿಂಸೆಯ ದೋಷ, ಈ ಪದಗಳು ನೃಪತಿಗೆ ಏಟು ಕೊಡುವ ಮಾತುಗಳೇ. ಸಾಮಾನ್ಯರ ಬದುಕನ್ನು ಅಥವಾ ಮಾಡಿಕೊಂಡ ಕನಕನಂಥವರಿಗೆ ಮಾತ್ರ ಈ ಬಗೆಯ ಸಂಕಥನವನ್ನು ಕಟ್ಟಲು ಸಾಧ್ಯ. ಹಂಸಪಕ್ಷಿಯು 'ನಿಮಗೆ ಮಾತ್ರ ಕುಟುಂಬವಲ್ಲದೇ ನಮಗೂ ಇದೆ' ಎಂದು ಹೇಳುವುದು ಲೋಕದೃಷ್ಟಿಯ ಭಿನ್ನತೆಯ ಅಭಿವ್ಯಕ್ತಿಯನ್ನು ಮಂಡಿಸುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ, ಕನಕದಾರ ಸಾಹಿತ್ಯದಲ್ಲಿ ಪ್ರಭುತ್ವದ ವಿರೋಧಿ ನೆಲೆಯೂ ಪ್ರತಿಪಾದಿತ ಆಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ತಳಸ್ಪರ್ಶಿಯಾಗಿ ಗುರುತಿಸಲಾಗಿದೆ.

## ಅಭ್ಯಸಿಸಿರುವ ಗ್ರಂಥಗಳು


1. ಸುಧಾಕರ, (ಸಂ), **ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,
2. ಗೀತಾ, ಡಿ.ಸಿ, **ಕನ್ನಡ ಸಂಸ್ಕೃತಿ ಅಧ್ಯಯನದ ಆಕರವಾಗಿ ಕನಕದಾಸರ ಕೃತಿಗಳ ಅಧ್ಯಯನ,** ರಾ.ಸಂ.ಶ.ಅ ಮತ್ತು ಸಂ. ಕೇಂದ್ರ. ಬೆಂಗಳೂರು.
3. ದೇಜವರೇಗೌಡ, **ಕನಕದಾಸರ ರಾಮಧ್ಯಾನ ಚರಿತ್ರೆ**, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.
4. ಚಿಕ್ಕಣ್ಣಯಣ್ಣೆಕಟ್ಟೆ,(ಸಂ),**ಕನಕದಾಸರ ರಾಮಧ್ಯಾನ ಚರಿತ್ರೆ**,,ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ. ಕಾಗಿನೆಲೆ,
5. ಹಾತೂರು ಶಂಕರನಾರಾಯಣ ಭಟ್ಟ, **ಕನಕದಾಸರ ನಳಚರಿತ್ರೆ,** ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
6. ಸುರೇಶ ನಾಗಲಮಡಿಕೆ, **ಮುತ್ತು ಬಂದಿದೆ ಕೇರಿಗೆ,** ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ.
7. ಲಕ್ಷ್ಮಿಪತಿ ಕೋಲಾರ, **ಕಾಲುದಾರಿ,** ಕ್ರೈಸ್ಟ್ ಕಾಲೇಜು, ಬೆಂಗಳೂರು, 2001
8. ಸೋಮಕ್ಕ ಮಾದಾಪುರ, **ಕನ್ನಡ ತತ್ವಪದಗಳಲ್ಲಿ ಪ್ರಭುತ್ವದ ಪರಿಕಲ್ಪನೆ,** ಗುಲಬರ್ಗಾ ವಿಶ್ವವಿದ್ಯಾನಿಲಯ, ಕಲಬುರ್ಗಿ.